# ಟರ್ಕಿ ಆಭರಣ



■ ಕೃಷ್ಣವೇಣಿ ಪ್ರಸಾದ್ ಮುಳಿಯ
ಚಿತ್ರಗಳು: ಮುಳಿಯ ಕೇಶವ ಭಟ್ & ಸನ್ಸ್

ಅದೊಂದು ಆಭರಣ ಮೇಳ. ಚಿನ್ನ, ವಜ್ರದ ನಾನಾ ವಿನ್ಯಾಸದ ಒಡವೆಗಳು ಮೇಳದಲ್ಲಿ ಮೇಳೈಸುತ್ತಿದ್ದರೆ, ಇತ್ತ ಹೆಂಗಳೆಯರು ತಮಗಿಷ್ಟವಾದ ಹಾರಮ್, ನೆಕ್ಲೇಸ್, ಬಳೆ, ಬ್ರೇಸ್ಲೆಟ್, ಪೆಂಡೆಂಟ್ ಕೊಳ್ಳಲು ಮುಗಿ ಬೀಳುತ್ತಿದ್ದರು. ಮೇಳದಲ್ಲಿ ರೂಪದರ್ಶಿಯರು ಹೊಸ ಹೊಸ ಆಕರ್ಷಕ ವಿನ್ಯಾಸದ ಒಡವೆಗಳನ್ನು ಧರಿಸಿ ರ್‍ಯಾಂಪ್ ಮೇಲೆ ಕ್ಯಾಟ್‌ವಾಕ್ ಮಾಡುತ್ತಿದ್ದರು. ಈ ರೂಪದರ್ಶಿಯರು ಧರಿಸಿದ್ದು ವಿಶಿಷ್ಟ ವಿನ್ಯಾಸದ ಆಕರ್ಷಕ ಟರ್ಕಿ ಒಡವೆಗಳನ್ನು. ಅಂದಿನ ಮೇಳದಲ್ಲಿ ಹೆಚ್ಚು ಮಂದಿ ಖರೀದಿಸಿದ್ದು ಕೂಡ ಹೊಸ ಟ್ರೆಂಡ್‌ನ ಟರ್ಕಿ ಒಡವೆಗಳನ್ನೇ.

## ಏನಿದು ಟರ್ಕಿ ಒಡವೆ?

ಇದೊಂದು ವಿಶೇಷ ಆಭರಣ. ಸುಮಾರು ಎರಡು ವರ್ಷಗಳ ಹಿಂದೆಯಷ್ಟೇ ಇದನ್ನು ಮಾರುಕಟ್ಟೆಗೆ ಪರಿಚಯಿಸಲಾಗಿದೆ. ಇದರ ವಿಶೇಷತೆ ಏನೆಂದರೆ ತೂಕದಲ್ಲಿ ಅತೀ ಕಡಿಮೆ ಹಾಗೂ ನೋಟದಲ್ಲಿ ಅಬ್ಬರವಾಗಿ ವಿಜೃಂಭಿಸುವುದು. ಪ್ರತಿಯೊಂದು ಸಣ್ಣ ಸಣ್ಣ ವಿನ್ಯಾಸದ ತುಣುಕು ಕೂಡಾ ಎರಡು ಪದರದಿಂದ ಕೂಡಿದೆ.

ಇದು ಎರಡು ತಂತಿಯನ್ನು ತಿರುಚಿ ಮಾಡಿದ್ದು ಮೇಲಿನ ಪದರ ಫಿಲಿಗ್ರಿ ಕೆಲಸ ಇದ್ದು ಕೆಳಗೆ ಇನ್ನೊಂದು ಪದರ ಹೊಂದಿದೆ. ಮೇಲಿನ ಫಿಲಿಗ್ರಿ ವಿನ್ಯಾಸವನ್ನು ಕೆತ್ತನೆ (ಕಟ್ಟಿಂಗ್) ಮಾಡಿದಾಗ ಬಹಳ ಹೊಳಪನ್ನು ಪಡೆಯುತ್ತದೆ. ನೋಡುಗರ ಕಣ್ಣು ಕೋರೈಸುವಂತೆ ಇರುತ್ತದೆ. ಮೇಲಿನ ಪದರ ಮೈಗೆ ಹಿತವಾಗಿ ನುಣ್ಣಗೆ ಚರ್ಮಕ್ಕೆ ಹಿತವಾಗಿ